ತಕ್ಷಣ ಬಿಡುಗಡೆಗಾಗಿ

# ವಿಶ್ವಬ್ಯಾಂಕು

ವಾರ್ತಾ ಪ್ರಸಾರ ನಂ. 2005/513/SAR

ಭೇಟಿಗಾಗಿ: ದೆಹಲಿಯಲ್ಲಿ : ಸುದೀಪ್ ಮಜುಂದಾರ್ (91 11) 2461-7241
ಇಮೇಲ್: smozumder@worldbank.org
ವಾಷಿಂಗ್ಟನ್‌ನಲ್ಲಿ: ಬೆಂಜಮಿನ್ ಕ್ರೋ (202) 473-5105
ಇಮೇಲ್: bcrow@worldbank.org

## ಭಾರತದ ನಗರಾಭಿವೃದ್ಧಿಗೆ ವಿಶ್ವಬ್ಯಾಂಕ್ ನೆರವು

### ತಮಿಳುನಾಡು ನಗರಾಭಿವೃದ್ಧಿ ಯೋಜನೆ 300 ಮಿಲಿಯನ್ ಯುಎಸ್ ಡಾಲರ್ ಸ್ವೀಕರಿಸಿದೆ

ವಾಷಿಂಗ್ಟನ್, ಜುಲೈ 5, 2005—ಇಂದು ವಿಶ್ವಬ್ಯಾಂಕ್ ಭಾರತ ಸರ್ಕಾರದ ತಮಿಳುನಾಡಿನ 3ನೆಯ ನಗರಾಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು 300 ಮಿಲಿಯನ್ ಡಾಲರ್ ಸಾಲದ ನೆರವಿಗೆ ಸಮ್ಮತಿ ಸೂಚಿಸಿದೆ (ಟಿಎನ್‌ಯುಡಿಪಿ3). ಈ ಯೋಜನೆಯ ಉದ್ದೇಶವು ನಗರದ ಮೂಲಭೂತ ಸೌಕರ್ಯವನ್ನು ಹೆಚ್ಚಿಸುವುದು, ಸಂಪನ್ಮೂಲಗಳ ಕ್ರೂಡೀಕರಣ ದೊಂದಿಗೆ ನಗರ ಮೂಲಭೂತ ಸೌಕರ್ಯದಲ್ಲಿ ಹೂಡಿಕೆ ಮತ್ತು ಸಾಂಸ್ಥಿಕ ಬಲವರ್ಧನೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಹಣಕಾಸಿಗೆ ಸಂಬಂಧಿಸಿದೆ.

ಸುಮಾರು 300 ಮಿಲಿಯನ್ ನಗರ ನಿವಾಸಿಗಳಲ್ಲಿ, ಭಾರತದ ನಗರಗಳ ಕೊಡುಗೆ 60% ಕ್ಕೂ ಹೆಚ್ಚು ಜಿಡಿಪಿ ಮತ್ತು 90% ಕ್ಕೂ ಹೆಚ್ಚು ಸರ್ಕಾರದ ವರಮಾನ ಎಂದು ಅಂದಾಜಿಸಲಾಗಿದೆ. ಏನೇ ಆದರೂ ಭಾರತದ ನಗರಗಳು ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನಗರಗಳು ಮೂಲಭೂತ ಸೌಕರ್ಯಗಳ ಕೊರತೆ, ಸೇವೆಯ ಕೊರತೆ, ಹಣಕಾಸಿನ ದುರ್ಬಲತೆ, ಸ್ಥಳೀಯ ಸರ್ಕಾರದ ಆಡಳಿತಲೋಪ ಇವುಗಳನ್ನು ಹೋಗಲಾಡಿಸಿದರೆ ಇವು ರಾಷ್ಟ್ರೀಯ ಆರ್ಥಿಕತೆ ಯಲ್ಲಿ ಪ್ರಮುಖಪಾತ್ರ ವಹಿಸುತ್ತವೆ. ಸುಮಾರು ತಮಿಳುನಾಡಿನ 47% ಜನಸಂಖ್ಯೆ ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಭಾರತದ ಅತಿಹೆಚ್ಚು ಶೇಕಡಾವಾರು ನಗರಗಳಲ್ಲಿ ಒಂದಾಗಿದೆ.

ವಿಶ್ವ ಬ್ಯಾಂಕ್‌ನ ಕಂಟ್ರಿ ಡೈರೆಕ್ಟರ್– ಮೈಕೇಲ್ ಕಾರ್ಟರ್ ಹೇಳುವಂತೆ, "ನಗರಗಳು ರಾಷ್ಟ್ರೀಯ ಸರ್ವತೋಮುಖ ಆರ್ಥಿಕತೆಯಲ್ಲಿ ಪಾತ್ರವಹಿಸಿದಾಗ್ಯೂ ಕೆಲವು ನಗರಗಳು ಮಾತ್ರ ನಿರಂತರ ಮತ್ತು ಪ್ರಬಲ ಆಧಾರದ ಮೇಲೆ ಇಂತಹ ಸೇವೆ ಒದಗಿಸುತ್ತವೆ." "ಈ ಯೋಜನೆ ಟಿಎನ್‌ಯುಡಿಪಿ2 ನ ಸಾಧನೆಗಳ ನಿರಂತರತೆಯನ್ನು ಕಾಪಾಡುವುದು, ನಗರ ಸುಧಾರಣೆ ಮತ್ತು ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದು ಹಾಗೂ ತಮಿಳುನಾಡಿನ ನಗರ ಮೂಲಭೂತ ಸೌಕರ್ಯಸೇವೆ ಯಲ್ಲಿ ಅಭಿವೃದ್ಧಿ ಮತ್ತು ನಿರಂತರತೆಯನ್ನು ಸಾಧಿಸುವುದಾಗಿದೆ ."

ಈ ಯೋಜನೆ ನಗರ ಮೂಲಭೂತ ಸೌಕರ್ಯಗಳಾದಂತಹ ಜಲನಿರ್ವಹಣೆ ಮತ್ತು ಕೊಳಚೆ, ಒಳಚರಂಡಿ ಯೋಜನೆ, ಘನವಸ್ತುಗಳ ನಿರ್ವಹಣೆ, ಬೀದಿದೀಪ, ನಗರ ರಸ್ತೆಗಳು ಮತ್ತು ಟ್ರಾಫಿಕ್ ಕಾರ್ಯ ನಿರ್ವಹಣೆಗೆ ಸಂಬಂಧಿಸಿದೆ. ಈ ಯೋಜನೆ ಚೆನ್ನೈ ನಗರದ ಮುಖಾಂತರ ರಸ್ತೆಗಳನ್ನು ಬಲಪಡಿಸಿ ಅಭಿವೃದ್ಧಿ ಪಡಿಸುವುದು, ಮತ್ತು ರಸ್ತೆ ನಿರ್ಮಾಣ ಹಾಗೂ ಸೇತುವೆ ನಿರ್ಮಾಣಗಳನ್ನು ಒಳಗೊಂಡಿದೆ. ಇದಲ್ಲದೆ ಸಾರಿಗೆಯ ತೊಂದರೆಯನ್ನು ಪರಿಹರಿಸಲು ಟ್ರಾಫಿಕ್ ನಿರ್ವಹಣೆಯನ್ನು ಕೈಗೆತ್ತಿಕೊಂಡಿದೆ. .

ಈ ಯೋಜನೆಯ ಮೂರು ಮುಖ್ಯ ಗುರಿಗಳೆಂದರೆ:

- ನಗರ ಸ್ಥಳೀಯ ಸಂಸ್ಥೆಗಳನ್ನು ಬಲಪಡಿಸುವುದು.ಇದರ ಉದ್ದೇಶ ವಿಕೇಂದ್ರೀಕರಣದ ನಿರಂತರತೆಗಾಗಿ ರಾಜ್ಯಮಟ್ಟದ ಸಂಸ್ಥೆಗಳ ಮೂಲಕ ಅಧಿಕಾರ ಬಲಪಡಿಸುವುದು ಮತ್ತು ಸಾಮರ್ಥ್ಯಯುತ ಯೋಜನೆಗಳ ನಿರಂತರ ವಿಸ್ತರಣೆ ಕೈಗೊಳ್ಳುವುದಾಗಿದೆ.
- ಖಾಸಗಿ ಸಂಸ್ಥೆಗಳ ಮೂಲಕ ನಗರ ಮೂಲಭೂತ ಸೌಕರ್ಯದ ಹೂಡಿಕೆಯಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಯುಎಲ್‌ಬಿಯನ್ನು ಹಣಕಾಸು ಮಾರುಕಟ್ಟೆ ಯೊಂದಿಗೆ ಜೋಡಿಸಿ ತಮಿಳುನಾಡು ನಗರಾಭಿವೃದ್ಧಿ ನಿಧಿಯ ಮೂಲಕ ನಿರ್ವಹಿಸುವುದಾಗಿದೆ. ಹಾಗೂ ಬೆಂಬಲ ಹಣಕಾಸು ನೀತಿಯನ್ನು ಉಪಯೋಗಿಸಿ ಕಡಿಮೆ ಆದಾಯದ ನೆರೆಹೊರೆ ಪ್ರದೇಶಗಳಲ್ಲಿ ಹೂಡುವುದಾಗಿದೆ.
- ಇತರೆ ಮುನಿಸಿಪಾಲಿಟಿಗಳಿಗೆ ಮಾದರಿಯನ್ನು ನೀಡುವುದು. ಈಗ, ಕೆಲವೇ ಸಾಲದ ನೆರವು ನಗರ ಮುನಿಸಿಪಾಲಿಟಿಗಳಿಗೆ ದೊರೆತಿದೆ. ತಮಿಳುನಾಡು ನಗರಾಭಿವೃದ್ಧಿ ನಿಧಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದೊಂದಿಗೆ ಹಣಕಾಸಿನ ಮಧ್ಯಸ್ಥಿಗೆ ವಹಿಸಿದೆ.

ಭಾರತ ಸರ್ಕಾರದ ಹತ್ತನೆ ಯೋಜನೆ (2002–07) ನಗರ ಸುಧಾರಣೆ ಮತ್ತು ಬೆಳವಣಿಗೆ ಹಾಗೂ ಬಡತನ ನಿರ್ಮೂಲನೆಗೆ ಹೆಚ್ಚು ಒತ್ತು ನೀಡಿದೆ. ಈ ಗುರಿಯನ್ನು ತಲುಪಲು ರಾಜ್ಯ ಮತ್ತು ಸ್ಥಳೀಯ ಮಟ್ಟಗಳಲ್ಲಿ ಸುಧಾರಣೆಗೆ ಮಹತ್ವ ನೀಡಿದೆ..

ವಿಶ್ವ ಬ್ಯಾಂಕ್‌ನ ಹಿರಿಯ ಮೂಲಭೂತ ಸೌಕರ್ಯದ ಯಣಕಾಸು ತಜ್ಞ – ಅಭಾ ಜೋಷಿ– ಘಾನಿ, ಹೇಳುವಂತೆ "ವಿಶ್ವ ಬ್ಯಾಂಕ್ ಭಾರತದ ನಗರ ಸುಧಾರಣಾ ನೀತಿಯಲ್ಲಿ ನಿರಂತರ ಬೆಂಬಲವನ್ನು ನೀಡುವುದಲ್ಲದೆ ವಿಕೇಂದ್ರೀಕರಣ ನೀತಿಯನ್ನು ಬಲಪಡಿಸುವುದು, ಸಾರ್ವಜನಿಕರ ಸಾಮರ್ಥ್ಯವನ್ನು ಹೆಚ್ಚಿಸುವುದು, ನಗರನಿರ್ವಹಣೆ, ಆಡಳಿತ ಮತ್ತು ಸಂಪನ್ಮೂಲ ಕ್ರೋಢೀಕರಣ ಸಾಧಿಸುವುದು."

"ಈ ಯೋಜನೆ ಸುಧಾರಣಾ ನಿರಂತರತೆಯಲ್ಲಿ ಹೆಚ್ಚುವರಿ ಚಲನಪರಿಮಾಣ ಒದಗಿಸುವುದು, ಸ್ಥಳೀಯ ಮಟ್ಟದಲ್ಲಿ ಹಣಕಾಸು ಒದಗಿಸುವುದು, ಹಣಕಾಸು ಮಾರುಕಟ್ಟೆಯಲ್ಲಿ ಯುಎಲ್‌ಬಿಗೆ ಅವಕಾಶ ಕಲ್ಪಿಸುವುದು ಮತ್ತು ಇದರಿಂದಾಗಿ ರಾಜ್ಯ ಬಜೆಟ್‌ನ ಹಣಕಾಸಿನ ಹೂಡಿಕೆಯಲ್ಲಿ ಮಿತವ್ಯಯ ಸಾಧಿಸಿ ಇದರ ಅವಲಂಬಿಕೆಯಲ್ಲಿ ಮಿತವ್ಯಯ ಸಾಧಿಸುವುದಾಗಿದೆ.."

ಈ ಸಾಲವು ಐಬಿಆರ್‌ಡಿ, ವಿಶ್ವಬ್ಯಾಂಕ್‌ನ ಸಹಾಯಹಸ್ತದಿಂದ ದೊರೆತಿದ್ದು 20 ವರ್ಷಗಳ ಮಿತಿಯೊಂದಿಗೆ 5 ವರ್ಷ ಹೆಚ್ಚುವರಿ ಕಾಲಾವಧಿ ಒಳಗೊಂಡಿದೆ.

ಹೆಚ್ಚಿನ ಮಾಹಿತಿಗಾಗಿ ಭಾರತದಲ್ಲಿ ವಿಶ್ವಬ್ಯಾಂಕ್ ಕಾರ್ಯಚಟುವಟಿಕೆಗಳು, ದಯವಿಟ್ಟು ಭೇಟಿಮಾಡಿ:
http://www.worldbank.org/in

###